ಸ್ಪೆಷಲ್ ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ಅವರಿಂದ ಸ್ಪೆಷಲ್ ಇನ್‌ವೆಸ್ಟಿಗೇಷನ್ ವರದಿ ಬಂದ ತಕ್ಷಣ ಕ್ರಮ ಕೈಗೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

(9) ಬಾದಾಮಿ ತಾಲ್ಲೂಕನ್ನು ಕಾಲರಾರೋಗ ಹಬ್ಬದಂತೆ ಮುಂಜಾಗ್ರತಾ ಕ್ರಮ.

ಶ್ರೀ ಬಿ. ಬಿ. ಚಿಮನಕಟ್ಟಿ(ಬಾದಾಮಿ) :- ಮಾನ್ಯ ಅಧ್ಯಕ್ಷರೇ, ಬಾದಾಮಿ ತಾಲ್ಲೂಕು ಮುತ್ತಲಗೇರಿ ಅನವಾಲ್ ಕೆರೂರು ಗ್ರಾಮಗಳಲ್ಲಿ ಹಾಗೂ ಇನ್ನಿತರೇ ಗ್ರಾಮಗಳಲ್ಲಿ ಕಾಲರ ಬೇನೆ ಹಬ್ಬಿ ಇಬ್ಬರು ಮೃತರಾಗಿದ್ದು ತಾಲ್ಲೂಕಿನ ಅನೇಕ ಜನ ಗ್ರಾಮಸ್ಥರು ಈ ರೋಗದಿಂದ ಬಳಲುತ್ತಿದ್ದು, ಆಸ್ಪತ್ರೆಗೆ ಸೇರಿದ್ದಾರೆ. ತಾಲ್ಲೂಕಿನ ಜನ ಭಯ ಭೀತಿಯಿಂದ ಜೀವಿಸುತ್ತಿದ್ದು ಈ ಕಾಲರ ರೋಗ ಇನ್ನೂ ಅನೇಕ ಗ್ರಾಮಗಳಿಗೆ ವ್ಯಾಪಿಸುವ ಸಂಭವವಿದ್ದು ಸರ್ಕಾರ ಸುಮಾರು 8 ದಿನಗಳಿಂದ ಈ ರೋಗ ಉಲ್ಬಣ ಗೊಂಡರೂ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೆ ಇರುವುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಬಾದಾಮಿ ತಾಲ್ಲೂಕಿನ ಬಾದಾಮಿ ಮತ್ತು ಕೆರೂರು ಗ್ರಾಮಗಳಲ್ಲಿ ಯಾವುದೇ ಕರಳುಬೇನೆ ಹಬ್ಬಿರುವ ವರದಿಗಳು ಇರುವುದಿಲ್ಲ. ಆದರೆ, ಮುತ್ತಲಗೇರಿ ಗ್ರಾಮದಲ್ಲಿ 2 ಪ್ರಕರಣಗಳು ದಾಖಲಾಗಿದ್ದು, ಒಂದು ಪ್ರಕರಣ ದಲ್ಲಿ ರೋಗಿಯು ಖಾಸಗಿ ವೈದ್ಯರಿಂದ ಚಿಕಿತ್ಸೆ ಪಡೆದರೂ ರೋಗ ಉಲ್ಬಣಗೊಂಡು ಮೃತಪಟ್ಟಿದ್ದಾನೆ. ಇನ್ನೊಂದು ಪ್ರಕರಣದಲ್ಲಿ ಸಕಾಲ ಚಿಕಿತ್ಸೆಯಿಂದ ರೋಗಿಯು ಗುಣ ಮುಖಿಹೊಂದಿರುತ್ತಾನೆ. ಈ ಎಲ್ಲಾ ಗ್ರಾಮಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿಯವರು ಭೇಟಿ ನೀಡಿದ್ದು, ಈ ಪ್ರದೇಶಗಳಲ್ಲಿ ಜನರಿಗೆ ಕುಡಿಯುವ ನೀರಿನಲ್ಲಿ ಉಪಯೋಗಿಸಲು ಹಾಲೋಜನ್ ಮಾತ್ರೆಗಳನ್ನು (ಕ್ಲೋರಿನೇಷನ್‌ಗಾಗಿ) ಕೊಡಲಾಗಿದೆ. ಮತ್ತು ಒ.ಆರ್.ಎಸ್. ಪಾಕೇಟ್ ಗಳನ್ನೂ ಕೂಡ ಕೊಡಲಾಗಿದೆ. ಈ ಪ್ರದೇಶಗಳಲ್ಲಿ ಡಿಸ್‌ಇನ್‌ಫೆಕ್ಷನ್ ಮಾಡಲಾಗಿದೆ. ಮತ್ತು ಈಗಾಗಲೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚನೆ ನೀಡಿ ಈ ಪ್ರದೇಶಗಳ ಮೇಲೆ ನಿಗಾ ಇಡಲು ಮತ್ತು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

(5) ಗಮನ ಸೆಳೆಯುವ ಸೂಚನೆ

ವಿಷಯ :- ಹೊಸಪೇಟೆ ಬಳಿ ಇರುವ ಶ್ರೀ ಜಂಭುನಾಥ ಸ್ವಾಮಿ ದೇವಸ್ಥಾನದಲ್ಲಿ ಸ್ಫೋಟದಿಂದ ಬರುಕು.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) :- ಸನ್ಮಾನ್ಯ ಅಧ್ಯಕ್ಷರೇ, ಹೊಸಪೇಟೆ ಬಳಿಯಿರುವ ಶ್ರೀ ಜಯನಾಥಸ್ವಾಮಿ ದೇವಸ್ಥಾನದ ಸುತ್ತ ಆರ್. ಪಿ. ಮೈನ್ಸ್‌ರವರು ನಡೆಸುವ ಸ್ಫೋಟದಿಂದಾಗಿ ದೇವಸ್ಥಾನದ ಬಿರುಕು ಬಿಟ್ಟಿರುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :- ಮಾನ್ಯ ಅಧ್ಯಕ್ಷರೇ, ವಿಜಯನಗರ ಕಾಲದ ಶ್ರೀ ಜಂಭುನಾಥ ಸ್ವಾಮಿ ದೇವಸ್ಥಾನವು ಮೆಸರ್ಸ್ ಆರ್. ಪಿ. ಮೈನ್ಸ್ ಹೊಸಪೇಟೆ ಅವರಿಗೆ ನೀಡಿರುವ ಗಣಿ ಗುತ್ತಿಗೆ ಪ್ರದೇಶಕ್ಕೆ ಬಹಳ ಹತ್ತಿರ ಇರುವುದು ನಿಜವಾದ ಸಂಗತಿ. ಸದರಿ ದೇವಸ್ಥಾನವು ಬಹಳ ಹಳೆಯದಾಗಿದ್ದು ಮೆಸರ್ಸ್ ಆರ್. ಪಿ. ಮೈನ್ಸ್ ಅವರು ಗಣಿಗಾರಿಕೆಗೆ ಉಪಯೋಗಿ ಸುತ್ತಿರುವ ಸ್ಫೋಟಕಗಳಿಂದ ದೇವಸ್ಥಾನದಲ್ಲಿ ಬಿರುಕು ಉಂಟಾಗಬಹುದೆಂದು ಭಾವಿಸ ಲಾಗಿದೆ. ಈ ಬಗ್ಗೆ ಹಿರಿಯ ಭೂ ವಿಜ್ಞಾನ, ಬಳ್ಳಾರಿ ಅವರಿಂದ ಒಂದು ವರದಿಯನ್ನು ಪಡೆಯಲಾಗಿದ್ದು ಅದರ ಪ್ರಕಾರ ಸ್ಫೋಟಕಗಳಿಂದ ದೇವಸ್ಥಾನದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಮೆಸರ್ಸ್ ಆರ್. ಪಿ. ಮೈನ್ಸ್ ಅವರು ಕೋಲಾರದ ಇನ್ಸ್‌ಟ್ಯೂಟ್ ಆಫ್ ರಾಕ್ ಬೇಸಿನ್ಸ್ ಸ್ಟಡೀಸ್ ಅವರಿಂದ ಮತ್ತು ಮೈನ್ಸ್ ಸ್ಟಡಿ ನಿರ್ದೇಶನಾಲಯದವರಿಂದ ಪರೀಕ್ಷೆ ನಡೆಸಿದ್ದು ಈ ಬಗ್ಗೆ ವರದಿ ನಿರೀಕ್ಷಿಸ ಲಾಗಿದೆ. ಮುಂದಿನ ಆದೇಶದವರೆಗೂ ಸ್ಫೋಟಕಗಳನ್ನು ಉಪಯೋಗಿಸದಿರಲು ಮತ್ತು ಗಣಿಗಾರಿಕೆಯನ್ನು ನಡೆಸದಿರಲು ಆದೇಶಿಸಲಾಗಿದೆ. ಈ ಬಗ್ಗೆ ಆರ್. ಪಿ. ಮೈನ್ಸ್ ಅವರಿಗೆ ಸೂಚನೆ ನೀಡಲಾಗಿದೆ. ಈ ಸಂಬಂಧದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಸ್ಥಳ ತನಿಖೆ ಮಾಡಿಸಿ ವಾಸ್ತವ ಸಂಗತಿ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲು ನಿಯೋಜಿಸಲಾಗಿದೆ. ಸದರಿ ನಿಯೋಗದ ವರದಿ ಆಧಾರದ ಮೇಲೆ ದೇವಸ್ಥಾನದ ಸುತ್ತಮುತ್ತ ಸ್ಫೋಟಕಗಳನ್ನು ಉಪಯೋಗಿಸಿ ಗಣಿಗಾರಿಕೆ ನಡೆಸದಿರಲು ಮತ್ತು ಸುರಕ್ಷಿತ ವಲಯ ಎಂದು ನಿರ್ಧರಿಸಲು ಕ್ರಮ ಕೈಗೊಳ್ಳಲಾಗುವುದು.

ಉಪಾಧ್ಯಕ್ಷರು :- ಮಾನ್ಯ ಜಿ. ಟಿ. ಪಾಟೀಲ್ ಹಾಗೂ ಮಾನ್ಯ ಮಂಜುನಾಥ್ ಸಿ. ಕುನ್ನೂರ್‌ರವರು ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ಮುಳುಗಡೆಯಾಗುತ್ತಿರುವ ಪ್ರದೇಶದ ಜನರ ಆಸ್ತಿಪಾಸ್ತಿಗಳಿಗೆ ಉಂಟಾಗಿ ಹಾನಿಯ ಬಗ್ಗೆ ಕೇಳಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡಲು ಮಾನ್ಯ ಮಂತ್ರಿಯವರು ಒಂದು ವಾರ ಸಮಯ ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೇ, ಒಂದು ಕಡೆ ಆಲಮಟ್ಟಿ ಡ್ಯಾಮರ್ ಕನ್‌ಸ್ಟ್ರಕ್ಷನ್ ಕೆಲಸ ನಡೆಯುತ್ತಿದೆ. ಅಲ್ಲಿ ಮುಳುಗಡೆಯಾಗಿರುವ ಪ್ರದೇಶದ ಜನರಿಗೆ ಆಶ್ವಾಸನೆ ಕೊಟ್ಟ ಪ್ರಕಾರ, ಎಂಪ್ಲಾಯ್‌ಮೆಂಟ್ ಕೊಡುವುದು

ಡಿಪ್ರಿಸಿಯೇಷನ್ ಅಮೌಂಟ್ ಹೆಚ್ಚಿಗೆ ಕೊಡುವ ಬಗ್ಗೆ ಈ ಪ್ರಶ್ನೆ ಇದೆ. ಇದಕ್ಕೆ ಉತ್ತರ ಕೊಡಲು ಒಂದು ವಾರ ಕಾಲಾವಕಾಶ ಏಕೆ ಬೇಕು?

ಶ್ರೀ ಕೆ. ಎನ್ ನಾಗೇಗೌಡ :– ಮಾನ್ಯ ಉಪಾಧ್ಯಕ್ಷರೇ, ಡಿಪ್ರಿಸಿಯೇಷನ್ ಮತ್ತು ನೇಮಕಾತಿ ವಿಷಯಗಳ ಬಗ್ಗೆ ಬೇಕಾದರೆ ಈಗಲೇ ಸ್ಟೇಟ್‌ಮೆಂಟ್ ಮಾಡುವುದಕ್ಕೆ ನಾನು ತಯಾರಿದ್ದೇನೆ. ಆದರೆ, ರೀಹೆಬಿಲಿಟೇಷನ್ ಪ್ರೋಗ್ರಾಮ್ ವಿಷಯಕ್ಕೆ ಸಂಬಂಧಪಟ್ಟಂತೆ ರೆವಿನ್ಯೂ ಇಲಾಖೆ, ಬಾಗಲಕೋಟೆ ಹೆಚ್.ಯು.ಡಿ ಇಲಾಖೆ, ಮತ್ತು ನಮ್ಮ ಇರಿಗೇಷನ್ ಇಲಾಖೆ ಈ ಮೂರೂ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ರೆವಿನ್ಯೂ ಮಂತ್ರಿಯವರು ಹೆಚ್.ಯು.ಡಿ. ಇಲಾಖೆಯ ಮಂತ್ರಿಯವರ ಜೊತೆ ನಾನು ಮಾತನಾಡಿ ಒಂದು ಕನ್‌ಸಾಲಿಡೇಟೆಡ್ ರಿಪೋರ್ಟ್‌ನ್ನು ಸದನಕ್ಕೆ ಕೊಟ್ಟರೆ ಅವರಿಂದ ಪೂರ್ಣ ವಿಷಯ ಜನಕ್ಕೆ ಗೊತ್ತಾಗುತ್ತದೆಂದು ತಿಳಿದು ಅದಕ್ಕೋಸ್ಕರ ಒಂದು ವಾರ ಸಮಯ ಕೇಳಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈ ವಿಷಯವನ್ನು ಜೀರೋ ಅವರ್‌ನಲ್ಲಿ ಎತ್ತಿಲ್ಲ. ಕಾಲಿಂಗ್ ಅಟೆನ್‌ಷನ್ ಮೂಲಕ ಎತ್ತಿರುವುದರಿಂದ ಸಮಯಕ್ಕೆ ಸರಿಯಾಗಿ ಉತ್ತರಕೊಡುವ ಜವಾಬ್ದಾರಿ ಸರ್ಕಾರಕ್ಕಿರುತ್ತದೆ.

ಶ್ರೀ ಕೆ. ಎನ್. ನಾಗೇಗೌಡ :– ನೇಮಕಾತಿ ಮತ್ತು ಡಿಪ್ರಿಸಿಯೇಷನ್ ಈ ಎರಡು ವಿಷಯಕ್ಕೆ ಸಂಬಂಧಪಟ್ಟಂತೆ ಈಗಲೇ ಬೇಕಾದರೆ ನಾನು ಸ್ಟೇಟ್ ಮಾಡುವುದಕ್ಕೆ ತಯಾರಿದ್ದೇನೆ. ಮುಳುಗಡೆಯಾದ ಪ್ರದೇಶದ ಜನರ ಹಿತ ದೃಷ್ಟಿಯಿಂದ ನಾನು ಕ್ಯಾಬಿನೆಟ್ ಮುಂದೆ ತಂದು ಪುನರ್ ವಸತಿಗಾಗಿ 20 ಕೋಟಿ ರೂಪಾಯಿಗಳನ್ನು ಕೊಟ್ಟು 1993 ರ ಆರ್ಡರ್‌ನ್ನು ನಾವು ಮತ್ತೆ ಇಂಪ್ಲಿಮೆಂಟ್ ಮಾಡಿದ್ದೇವೆ. ಅದಕ್ಕೋಸ್ಕರ ಉತ್ತರ ಕೊಡಲು ಸ್ವಲ್ಪ ಸಮಯಕೇಳಿದ್ದೇನೆ. ಬೇಕಾದರೆ ಮಂಗಳವಾರದ ದಿವಸ ಇದನ್ನು ಹಾಕಿಕೊಳ್ಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಮಂತ್ರಿಯವರು ಹೇಳುವುದರಲ್ಲಿ ವ್ಯತ್ಯಾಸವಿದೆ. ಯಾವುದನ್ನು ಕೇಳಿಲ್ಲವೋ ಅದಕ್ಕೆ ಉತ್ತರ ಹೇಳುವುದಕ್ಕೆ ಹೋಗುತ್ತಿದ್ದಾರೆ. ಯಾವುದನ್ನು ಕೇಳಿದ್ದಾರೋ ಅದಕ್ಕೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ. ಎನ್. ನಾಗೇಗೌಡ :– ಡಿಪ್ರಿಸಿಯೇಷನ್ ಮತ್ತು ಅಪಾಯಿಂಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಈ ತಕ್ಷಣದಲ್ಲಿ ನಾನು ಉತ್ತರ ಕೊಡಲು ಸಿದ್ಧನಿದ್ದೇನೆ.

ಉಪಾಧ್ಯಕ್ಷರು :– ಇದು ಇಲ್ಲಿಗೆ ಸಾಕು, ಈಗ ಬಜೆಟ್ ಮೇಲೆ ಸನ್ಮಾನ್ಯ ನಂಜೇಗೌಡರು ಮಾತನಾಡಲಿ.